ಈ) ಈಗಿರುವ ಕಸಾಯಿ ಖಾನೆಗಳು ನಗರದ ಮಧ್ಯದ ಇಕ್ಕಟ್ಟಿನ ಜಾಗದಲ್ಲಿದ್ದು ಆರೋಗ್ಯಕರವಾದ ಮಾಂಸ ಉತ್ಪಾದನೆಗೆ ಅನಾನುಕೂಲವಾಗಿರುವುದಲ್ಲದೆ ಅಲ್ಲಿ ಅವುಗಳ ಸುಧಾರಣೆಗೆ ಅವಕಾಶ ವಿಲ್ಲದೆ ಇರುವುದರಿಂದ ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಯೋಜಿಸಿ ಆಧುನಿಕ ಕಸಾಯಿಖಾನೆಯಂನ್ನು ನಿರ್ಮಾಣ ಮಾಡಲಂ ನಿರ್ಧರಿಸಲಾಗಿದೆಯಷ್ಟೆ.

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪನೆ ಬಗ್ಗೆ

೩೦೧೭. ಶ್ರೀ ಸ್ವಾಮಿರಾವ್ (ಪೊಸಗನಗರ).–ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ಕಸಾಯಿಖಾನೆ ನಿರ್ಮಾಣ ಆಗುತ್ತಿರುವುದು ನಿಜವೆ ?

ಆ) ಪರವಾನಿಗೆ ಯಾರಿಗೆ ಹಾಗೂ ಯಾವಾಗ ಕೊಡಲಾಯಿತು ?

ಇ) ಒಂದು ದಿನಕ್ಕೆ ಕಸಾಯಿಖಾನೆಯಿಂದ ಎಷ್ಟು ಪ್ರಾಣಿಗಳು ವಧೆಯಾಗುತ್ತಿದೆ?

ಶ್ರೀ ಕೃಷ್ಣ, (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ) ನಿಜ

ಆ) ಆಧುನಿಕ ಕಸಾಯಿಖಾನೆಯನ್ನು ನಿರ್ಮಿಸಬೇಕೆಂಬ ಮುಖ್ಯ ಉದ್ದೇಶದಿಂದಲೇ ಈ ನಿಗಮವನ್ನು ೧೯೭೪ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಬೆಂಗಳೂರು ಮಹಾನಗರಪಾಲಿಕೆಯ ಮತ್ತು ಕೇಂದ್ರ ಸರ್ಕಾರದ ಸಹಮತಿಯೊಂದಿಗೆ ಕರ್ನಾಟಕ ಸರ್ಕಾರದ ಉದ್ದಿಮೆಯಾಗಿ ಸ್ಥಾಪಿಸಿರುತ್ತದೆ.

ಇ) ಒಂದು ದಿನಕ್ಕೆ ೩,೦೦೦ ಕುರಿ, ಮೇಕೆ, ೩೦೦ ಎತ್ತು ಮತ್ತು ಕೋಣ ಮತ್ತು ೧೦೧ ಹಂದಿಗಳ ವಧೆಗೆ ಅನುಕೂಲವಾಗುವಂತೆ ಆಧುನಿಕ ಕಸಾಯಿಖಾನೆಯನ್ನು ಯೋಜಿಸಲಾಗಿದೆ.

ಪ್ರಶ್ನೆ ನಂ. ೧೦೭೦ (೨೯೭೪) ಮತ್ತು ೧೦೭೯ (೩೦೧೭)

ಅಧ್ಯಕ್ಷರು.—ಇವೆ ರ್ನಿಂದು ಪ್ರಶ್ನೆಯನ್ನು ಶ್ರೀ ಎಸ್. ಸ್ವಾಮಿರಾವ್‌ರವರು ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪನೆ ಬಗ್ಗೆ ಕೇಳಿದ್ದಾರೆ. ಅವರು ತಮ್ಮ ಪ್ರಶ್ನೆಗೆ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಶ್ರೀ ಜಿ. ಎಂ. ಕಾನಡೆಯವರಿಗೆ ತಿಳಿಸಿದ್ದಾರೆ. ಅವರ ಪರವಾಗಿ ಮಾನ್ಯ ಕಾನಡೆಯವರೇ ತಾವೇ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪನೆಯ ಬಗ್ಗೆ ಅನೇಕ ಸಂಘ ಸಂಸ್ಥೆಗಳು, ಅನೇಕ ರಾಜಕಾರಣಿಗಳು ಮಂತ್ರಿ ಜನತೆ ಇದನ್ನು ವಿರೋಧ ಮಾಡಿದ್ದಾರೆ. ಈಗ ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲೂ ಕೂಡ ಆಧುನಿಕ ಕಸಾಯಿಖಾನೆಯನ್ನು ತೆರೆಯುವ ಬಗ್ಗೆ ಲೈಸನ್ಸ್‌ನ್ನು ಕೊಡುತ್ತಿಲ್ಲ. ಹೀಗಿರುವಾಗ ಶಾಂತಿಪ್ರಿಯವಾಗಿರತಕ್ಕ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆಯನ್ನು ತೆರೆಯುವುದಕ್ಕೆ ಅವಕಾಶ ಕೊಟ್ಟಿರುವಂತಹದ್ದು ಸರಿಯೇ? ಇದನ್ನು ಯಾರ ಕಾಲದಲ್ಲಿ ಲೈಸನ್ಸ್ ಕೊಡಲಾಗಿದೆ? ಬೆಂಗಳೂರು ನಗರವನ್ನು ಆಧುನಿಕ ಚಿಕಾಗೋವನ್ನಾಗಿ ಮಾಡಬೇಕೆಂಬ ಅಭಿಪ್ರಾಯ ಈ ಸರ್ಕಾರಕ್ಕೆ ಇದೆಯೇ? ಈ ಒಂದು ಪ್ರಯತ್ನವನ್ನು ಈಗಲಾದರೂ ಈ ಜನತೆಯ ಒತ್ತಡದಿಂದ, ಹಾಗೂ ಸಂಘ ಸಂಸ್ಥೆಗಳ ಒತ್ತಡದಿಂದ, ಅನೇಕ ರಾಜಕೀಯ ನಾಯಕರುಗಳ ವಿರೋಧ ಇರುವುದರಿಂದ, ಈ ಪ್ರಯತ್ನವನ್ನು ಕೈಬಿಡಲಾಗುವುದೇ ?

ಶ್ರೀ ಕೃಷ್ಣ.—ಅಧ್ಯಕ್ಷರೇ, ಕಸಾಯಿಖಾನೆಯನ್ನು ಹೊಸದಾಗಿ ಪ್ರಾರಂಭ ಮಾಡುತ್ತಿದ್ದೇವೆ ಎನ್ನುವುದು ಸರಿಯಲ್ಲ. ಈಗಾಗಲೇ ೪ ಕಸಾಯಿಖಾನೆಗಳು ಬೆಂಗಳೂರು ನಗರದ ಒಳಗೆ ಕೆಲಸ ಮಾಡುತ್ತಿವೆ, ಇವು ೫೦ ವರ್ಷಕ್ಕಿಂತಲೂ ಹಿಂದೆ ಆರಂಭವಾಗಿದ್ದು ಇಲ್ಲಿ ಸ್ಥಳದ ಅಭಾವ ಇದ್ದು ಒಳ್ಳೆಯ ರೀತಿಯ ಶುಚಿತ್ವವನ್ನು ಕಾಪಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಕೇಂದ್ರಸರ್ಕಾರ ಹಾಗೂ ಮಹಾ

ನಗರಪಾಲಿಕೆಯವರ ನೆರವಿನೊಂದಿಗೆ ಆಧುನಿಕ ಕಸಾಯಿಖಾನೆ ಆರಂಭ ಮಾಡುತ್ತಿದ್ದೇವೆ. ಇದರ ಬಗ್ಗೆ ಅನೇಕ ಸಂಘ ಸಂಸ್ಥೆಗಳು ಧ್ವನಿ ಎತ್ತಿದ್ದಾರೆ. ದಿನವಹೀ ಸಾವಿರಾರು ಗೋವುಗಳನ್ನು ಕೊಲ್ಲಲ್ಪಟ್ಟು ಪರದೇಶಗಳಿಗೆ ರಫ್ತು ಮಾಡುತ್ತಾರೆನ್ನುವ ಅಭಿಪ್ರಾಯ ಇದ್ದಹಾಗೆ ಇದೆ. ಈಗ ಗೋಹತ್ಯೆ ನಿಷೇಧ ಕಾನೂನು ಇದೆ. ಕರುವನ್ನಾಗಲೀ, ಗೋವನ್ನಾಗಲೀ ಕಾನೂನು ಪ್ರಕಾರ ಕೊಲ್ಲುವುದಕ್ಕಾಗುವುದಿಲ್ಲ. ೧೨ ವರ್ಷಕ್ಕೆ ಹೆಚ್ಚು ಇರುವ ಹಾಗೂ ಉಪಯೋಗಕ್ಕೆ ಬಾರದ ಗೋವುಗಳನ್ನು ಕೊಲ್ಲುವುದಕ್ಕೆ ಅವಕಾಶ ಇದೆ. ಸುಮಾರು ೧೭೦೦ ಕುರಿ, ೭೫ ದನಗಳನ್ನು ಮತ್ತು ೨೫ ಹಂದಿಗಳನ್ನು ಈಗಿರುವ ಕಸಾಯಿಖಾನೆಗಳಲ್ಲಿ ಕೊಲ್ಲಲಾಗುತ್ತಿದ್ದು, ಈ ಶತಮಾನದ ಅಂತ್ಯಕ್ಕೆ ಎಂದರೆ ೨೦೦೦ನೇ ಇಸವಿಗೆ ಎಷ್ಟು ಬೇಡಿಕೆ ಬೇಕಾಗಬಹುದು ಎಂದು ಲೆಕ್ಕ ಹಾಕಿ ೩,೦೦೦ ಕುರಿ ಮೇಕೆ, ೩೦೦ ದೊಡ್ಡ ರಾಸುಗಳು, ಹಾಗೂ ೧೯೦ ಹಂದಿಗಳನ್ನು ಕೊಲ್ಲುವುದಕ್ಕೆ ಅವಕಾಶ ಮಾಡಿ ಈ ಕಸಾಯಿಖಾನೆ ಸ್ಥಾಪಿಸಲಾಗುವುದು ಎಂದರೆ ಅಷ್ಟನ್ನೂ ಕೊಲ್ಲಬೇಕೆಂದೇನೂ ಇಲ್ಲ. ಶಾಶ್ವತವನ್ನು ಕಾಪಾಡಬೇಕೆಂಬುದೇ ಮುಖ್ಯ ಉದ್ದೇಶ. ಆದರೆ ಸಂಘಸಂಸ್ಥೆಗಳು ತಪ್ಪು ತಿಳುವಳಿಕೆಯಿಂದ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡುತ್ತಿದ್ದಾರೆ. ಗೋ ಹತ್ಯೆ ಕಾನೂನು ಇದ್ದೇ ಇದೆ. ಆದ್ದರಿಂದ ನಿಜಸ್ಥಿತಿಯನ್ನು ಅರಿತುಕೊಂಡು ಅವರು ಅದನ್ನು ಕೈಬಿಡಬೇಕೆಂದು ಹೇಳುತ್ತೇನೆ.

ಶ್ರೀ ಬಿ ಲಕ್ಕಪ್ಪ.—ಹೊಸ ಕಸಾಯಿಖಾನೆಯಲ್ಲಿ ಈ ಪ್ರಾಣಿಗಳನ್ನು ಯಾವ ರೀತಿ ವಧೆ ಮಾಡ, ತ್ತಾರೆ? ಅಲ್ಲಿ ಯಾಂತ್ರೀಕೃತ ಹೊಸ ವ್ಯವಸ್ಥೆ ಏನಾದರೂ ಇದೆಯೇ ? ಚಿಕಾಗೋದಲ್ಲಿನ ಕಸಾಯಿ ಖಾನೆಯಲ್ಲಿ ಒಂದುಕಡೆ ೫೦೦ ರಾಸುಗಳನ್ನು ಕೂಡಿಸ್ತಾರೆ ಒಂದು ಬಟನ್ ಒತ್ತಿದರೆ ಬೋನ್ ಒಂದು ಕಡೆ ಮಾಂಸ ಒಂದು ಕಡೆ ಹಾಗೂ ವೇಸ್ಟ್ ಎಲ್ಲಾ ಒಂದು ಕಡೆ ಬರುತ್ತದೆ ಎಂದು ನಾನು ಕೇಳಿದ್ದೇನೆ. ಆ ರೀತಿಯ ವ್ಯವಸ್ಥೆ ಮಾಡತಕ್ಕದ್ದು ಇಲ್ಲಿ ಇದೆಯೇ? ಇದಕ್ಕೆ ಲೈಸೆನ್ಸ್ ಕೊಡುವುದೇ ಸರಿಯಿಲ್ಲವೆಂದು ಅನೇಕ ಸಂಘಸಂಸ್ಥೆಗಳವರು ಹೇಳುತ್ತಿದ್ದಾರೆ. ಇದಕ್ಕೆ ಅನೇಕ ಜನರ ವಿರೋಧವಿದ್ದು ಅನೇಕ ಸಂಘ ಸಂಸ್ಥೆಗಳವರು ಮನವಿಗಳನ್ನು ಕೊಟ್ಟಿದ್ದು ಅವುಗಳನ್ನು ತಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ. ಆಧುನಿಕ ಸೌಕರ್ಯಗಳನ್ನು ಕೊಟ್ಟು ಇನ್ನೂ ಹೆಚ್ಚಿನ ಹಿಂಸೆಗೆ ಅವನ್ನು ಗುರಿಪಡಿಸುವುದು ಸರಿಯಲ್ಲ. ಆಧುನಿಕ ಕಸಾಯಿಖಾನೆ ಆಗಬಾರದು. ಇವತ್ತು ಕಸಾಯಿಖಾನೆ ಮಾಡದಿದ್ದರೂ ಜನರು ಬೇರೆ ರೀತಿ ತಿನ್ನುವವರು ತಿಂದೇ ತಿನ್ನುತ್ತಾರೆ. ಆದರೆ ಇವತ್ತು ಹಿಂಸೆಯನ್ನು ತಪ್ಪಿಸಬೇಕು. ದಯಮಾಡಿ ಅದಕ್ಕೆ ಅನುಮತಿ ಕೊಡಬಾರದು, ಇವತ್ತು ಇಂತಹ ಕಸಾಯಿಖಾನೆಗಳಿಗೆ ಸರ್ಕಾರ ಪ್ರೋತ್ಸಾಹ ಕೊಡಬಾರದು ಎಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಶ್ರೀ ಕೃಷ್ಣ.—ಅಧ್ಯಕ್ಷರೇ, ಈಗ ಬಹಳ ಕೂಡ್ ಮೆಥಡ್‌ನಲ್ಲಿ ಮೇಕೆ ಹಾಗೂ ಕುರಿಗಳನ್ನು ಕೊಲ್ಲುತ್ತಿರುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಆದರೆ ಆಧುನಿಕ ಕಸಾಯಿಖಾನೆಯಲ್ಲಿ ರಾಸುಗಳಿಗೆ ಇಂಜೆಕ್ಷನ್ ಕೊಟ್ಟು ಅವುಗಳಿಗೆ ನೋವು ಆಗದ ರೀತಿಯಲ್ಲಿ ಅವನ್ನು ಹತ್ಯೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಮಂತ್ರಿ ಮಾನ್ಯ ಸದಸ್ಯರು ಹೇಳಿದಂತೆ ಒಂದೇ ಸಾರಿ ೫೦-೬೦ ಕುರಿಗಳನ್ನೋ ರಾಸುಗಳನ್ನೋ ಒಳಗೆ ಸೇರಿಸಿ ಯಾಂತ್ರೀಕೃತವಾಗಿ ಹತ್ಯೆ ಮಾಡುವ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಇವತ್ತು ತಪ್ಪು ತಿಳುವಳಿಕೆಯಿಂದ ಅನೇಕ ಸಂಘಸಂಸ್ಥೆಗಳವರು ಪ್ರತಿಭಟನೆ ಮಾಡುತ್ತಿದ್ದಾರೆ. ಹಿಂದೂಗಳಲ್ಲಿ ಮಾಂಸಾಹಾರಿಗಳು ಜಾಸ್ತಿ ಇದ್ದಾರೆ. ಎಲ್ಲಿಯವರೆಗೆ ಮಾಂಸಾಹಾರಿಗಳು ಇರುತ್ತಾರೋ ಅಲ್ಲಿಯವರೆಗೆ ಮಾಂಸದ ಬೇಡಿಕೆ ಇದ್ದೇ ಇರುತ್ತದೆ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಈಗ ನಾವೇನೂ ಹೊಸದಾಗಿ ಇದನ್ನು ಮಾಡುತ್ತಿಲ್ಲ. ಶಾಶ್ವತವನ್ನು ಕಾಪಾಡಿ ಒಳ್ಳೆಯ ರೀತಿಯ ಮಾಂಸವನ್ನು ಕೊಡಬೇಕೆಂದು ಇದನ್ನು ಮಾಡುತ್ತಿದ್ದೇವೆ. ಏನು ತಪ್ಪು ತಿಳುವಳಿಕೆ ಇದೆ ಅದನ್ನೂ ಅರ್ಥ ಮಾಡಿಕೊಳ್ಳಬೇಕು. ಇವತ್ತು ಅನೇಕ ಜನ ತಪ್ಪು ಗ್ರಹಿಕೆಯಿಂದ ಚಳವಳಿ ಮಾಡುತ್ತಿರುವುದರಿಂದ ಅವರಿಗೆ ತಿಳುವಳಿಕೆ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ತಪ್ಪು ತಿಳುವಳಿಕೆ ಜನರದ್ದು ಅಲ್ಲ

ಅಧ್ಯಕ್ಷರು.—ಇದು ಒಳ್ಳೆಯದಲ್ಲ, ಪ್ರಶ್ನೆ ಹಾಕಿದ್ದು ಅವರು ಇನ್ನೂ ಪ್ರಶ್ನೆಗಳನ್ನು ಕೇಳಿಲ್ಲ. ನೀವು ಕೂಡಿ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಪ್ರಶ್ನೆ ಹಾಕಿದವರು ಮೊದಲು ಉಪ ಪ್ರಶ್ನೆಗಳನ್ನು ಕೇಳಬೇಕು.

ಶ್ರೀ ಜಿ. ಎಂ. ಕಾನಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮುಂದೆ ೩ ಸಾವಿರ ಕುರಿ ಮೇಕೆ, ೩೦೦ ದೊಡ್ಡ ರಾಸು ಹಾಗೂ ೧೮೦ ಹಂದಿಗಳನ್ನು ಕೊಲ್ಲುವಂತಹ ಆಧುನಿಕ ಕಸಾಯಿಖಾನೆಯನ್ನು ಮಾಡಲಾಗುತ್ತದೆಂದೂ ಹೇಳಿದ್ದಾರೆ. ಈಗ ಅಲ್ಲಿ ಎಮ್ಮೆಗಳನ್ನು ಕುಯ್ಯಲಿಕ್ಕೆ ವ್ಯವಸ್ಥೆ ಮಾಡುವುದಿಲ್ಲವೇ ಕುರಿ, ಮೇಕೆ ಮಾಂಸವನ್ನು ತಿನ್ನಬೇಕಾದರೆ ಡಾಕ್ಟರು ಟೆಸ್ಟ್ ಮಾಡಿದ ಮೇಲೆ ಅವುಗಳನ್ನು ಕುಯ್ಯಬೇಕು ಆಮೇಲೆ ಮಾಂಸ ಮಾರಾಟ ಮಾಡಬೇಕೆಂದು ಕಾನೂನು ಇದೆ. ೨೦೦ ಕುರಿ ಮೇಕೆಗಳನ್ನು ಕಟ್ ಮಾಡಲಿಕ್ಕೆ ಲೈಸೆನ್ಸ್ ತೆಗೆದುಕೊಂಡು ಅದಕ್ಕಿಂತ ಜಾಸ್ತಿ ಕಟ್ ಮಾಡುತ್ತಾರೆ, ಇದಕ್ಕೆ ಒಂದು ರೂಲ್ಸ್ ಮಾಡಬೇಕಾಗುತ್ತದೆ. ಲೈಸನ್ಸ್ ತೆಗೆದುಕೊಳ್ಳುವುದು ಒಂದು ಕಡೆಗೆ ಅವರು ಕುಯ್ಯುವುದು ಇನ್ನೊಂದು ಕಡೆಗೆ ಈ ರೀತಿ ನಡೆಯುತ್ತಿದೆ, ೧೦-೨೦ಲೀಟರ್ ಹೆಂಡ ಮಾರಲಿಕ್ಕೆ ಲೈಸೆನ್ಸ್ ತೆಗೆದುಕೊಂಡು ೧೦೦ ಲೀ ರ್ ಮಾರಾಟ ಮಾಡುತ್ತಾರೆ. ಎಷ್ಟು ಕುರಿ ಮೇಕೆ ಅಥವಾ ಇನ್ನಾವುದೇ ಪ್ರಾಣಿಗಳನ್ನು ಕಟ್ ಮಾಡಲಿಕ್ಕೆ ಲೈಸೆನ್ಸ್ ತೆಗೆದುಕೊಂಡಿರುತ್ತಾರೆ ಅದಕ್ಕಿಂತ ಜಾಸ್ತಿ ಕಟ್ ಮಾಡಿದರೆ ಅಂತಹವರನ್ನು ಜೈಲಿಗೆ ಕಳುಹಿಸುವಂತಹ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೃಷ್ಣ, ಈಗಾಗಲೇ ೭೫ ದೊಡ್ಡ ರಾಸುಗಳನ್ನು ೧೬೦೦ ಕುರಿ ಮೇಕೆಗಳನ್ನು ಹಾಗೂ ೭೫ ಹಂದಿಗಳನ್ನು ಕೊಲ್ಲುತ್ತಿದ್ದಾರೆಂದು ಹೇಳಿದ್ದೇನೆ. ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಎಷ್ಟು ರಾಸುಗಳನ್ನು ಕೊಲ್ಲಬೇಕೋ ಅಷ್ಟು ರಾಸುಗಳನ್ನು ಕೊಲ್ಲುತ್ತಾರೆ. ಬೇಡಿಕೆ ಒಮ್ಮೆ ಜಾಸ್ತಿಯಾಗಬಹುದು, ಕಡಿಮೆಯಾಗಬಹುದು ಅದು ಬೇಡಿಕೆಯ ಮೇಲೆ ಹೋಗುತ್ತದೆ. ಈಗ ೩೦೦ಕ್ಕೆ ಅವಕಾಶ ಮಾಡಲಾಗಿದೆ. ಈಗ ಬೇಕಾದಷ್ಟು ಕಸಾಯಿಖಾನೆಗಳು ಇವೆ. ನಾಲ್ಕು ಕಸಾಯಿಖಾನೆಗಳಲ್ಲಿ ೭೫ ದೊಡ್ಡರಾಸುಗಳನ್ನು ಇನ್ನುಮುಂದೆ ೩೦೦ ದೊಡ್ಡರಾಸುಗಳನ್ನು ಕೊಲ್ಲಲಿಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಶ್ರೀ ಪಂಪಾಪತಿ.—ಮಾನ್ಯ ಸಚಿವರು ತಪ್ಪು ತಿಳುವಳಿಕೆಯಿಂದ ಸಂಘ ಸಂಸ್ಥೆಗಳವರು ಇದನ್ನು ವಿರೋಧ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಆ ರೀತಿ ಭಾವಿಸಬಾರದು. ಇದು ಬಸವಣ್ಣನವರು ಹುಟ್ಟಿರತಕ್ಕ ರಾಜ್ಯ, ಮಹಾತ್ಮಗಾಂಧೀಜಿಯವರ ಫೋಟೋ ಇಟ್ಟುಕೊಂಡು ಅವರ ಹೆಸರಿನಲ್ಲಿ ಅಡಳಿತವನ್ನು ನಡೆಸತಕ್ಕ ರಾಜ್ಯ. ಅವರ ತತ್ವವನ್ನು ಪಾಲಿಸತಕ್ಕ ತಾವು ಯಾರೋ ಪ್ರಾಣಿಗಳನ್ನು ವಧೆ ಮಾಡುತ್ತಾರೆಂದು ಹೇಳಿ ಅದಕ್ಕಾಗಿಯೇ ಒಂದು ಕಾರ್ಖಾನೆಯನ್ನು ತಯಾರು ಮಾಡಿ ಅದರ ಮೂಲಕ ಪ್ರಾಣಿಗಳನ್ನು ಕೊಲೆ ಮಾಡತಕ್ಕ ವ್ಯವಸ್ಥೆಗೆ ತಾವು ಮುಂದಾಗಬಾರದು ಹಾಗೆ ಮಾಡಿದರೆ ಮಹಾತ್ಮಾಗಾಂಧೀಜಿಯವರ ತತ್ವವನ್ನು ಗಾಳಿಗೆ ತೂರಿದಂತಾಗುತ್ತದೆ, ಈಗ ತಾವು ಪರವಾನಗಿ ಕೊಟ್ಟಿದ್ದೀರಿ, ಅದನ್ನು ನಿಲ್ಲಿಸಬೇಕು. ನಿಲ್ಲಿಸದಿದ್ದರೆ ಜನರು ಉಗ್ರವಾಗಿ ಚಳುವಳಿ ಮಾಡಬೇಕಾಗುತ್ತದೆ. ಆ ಚಳುವಳಿಯನ್ನು ನಿಲ್ಲಿಸಲಿಕ್ಕೆ ಸರ್ಕಾರಕ್ಕೆ ಶಕ್ತಿಯಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು,—ಮಾನ್ಯ ಸದಸ್ಯರು ಭಾಷಣ ಮಾಡಬೇಡಿ ಪ್ರಶ್ನೆಯನ್ನು ಕೇಳಿ.

ಶ್ರೀ ಪಂಪಾಪತಿ.—ಇದನ್ನು ತಡೆಯದಿದ್ದರೆ ಒಂದು ಉಗ್ರ ಚಳುವಳಿಯನ್ನು ಎದುರಿಸಬೇಕಾಗುತ್ತದೆ. ದಯವಿಟ್ಟು ಅಂತಹ ಕೃತ್ಯಕ್ಕೆ ಕೈಹಾಕದೆ. ಈ ದೇಶದಲ್ಲಿ ಕೆಲವು ಜನರು ಯಂತ್ರದಿಂದ ಕೊಲೆಮಾಡಿದಂತಹ ಪ್ರಾಣಿಗಳ ಮಾಂಸವನ್ನು ಊಟ ಮಾಡುವುದಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟು ಪರವಾನಗಿಯನ್ನು ಕೊಡಬೇಕು. ಬೇರೆ ರಾಜ್ಯಗಳ ವಿಚಾರ ಬೇಡ ಇಲ್ಲಿ ಈ ಕಸಾಯಿಖಾನೆ ಸ್ಥಾಪನೆಗೆ ಅವಕಾಶ ಕೊಡುವುದಿಲ್ಲ ಎಂದು ತಾವು ಹೇಳಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಮತ್ತೆ ಭಾಷಣ ಮಾಡುತ್ತಿದ್ದೀರಿ ಏನಾಗಿ ಇಷ್ಟೊಂದು ಸರ್ವೀಸಾ ಆಗಿದೆ ಯಾವರೀತಿ ಮಾತನಾಡಬೇಕೆಂಬುದನ್ನು ತಿಳಿದುಕೊಳ್ಳುವುದು ಬೇಡವೇ ?

ಶ್ರೀ ಪಂಪಾಪತಿ.—ಬೇರೆ ರಾಜ್ಯಗಳಲ್ಲಿರತಕ್ಕವರಿಗೆ ಪರವಾನಗಿಯನ್ನು ಕೊಟ್ಟು ಪ್ರಾಣಿಗಳ ವಧೆ ಮಾಡತಕ್ಕದ್ದಕ್ಕೆ ತಾವು ಅವಕಾಶ ಮಾಡಿಕೊಡುತ್ತಿದ್ದೀರಿ. ದಯವಿಟ್ಟು ಅಷ್ಟನ್ನು ಕೈಬಿಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೃಷ್ಣ.—ನಾನು ಈಗಾಗಲೇ ವಿವರವಾಗಿ ಹೇಳಿದ್ದೇನೆ. ಕಸಾಯಿಖಾನೆಗಳು ಈಗಾಗಲೇ ಇವೆ. ಈಗ ಅಲ್ಲಿ ಎಷ್ಟೆಷ್ಟು ಪ್ರಾಣಿಗಳನ್ನು ಕೊಲ್ಲುತ್ತಿದ್ದಾರೆನ್ನುವುದನ್ನು ಹೇಳಿದ್ದೇನೆ. ೨೦೦೦ದ ಇಸವಿಯ ಹೊತ್ತಿಗೆ ಬೇಡಿಕೆ ಎಷ್ಟಾಗಬಹುದೆಂಬುದನ್ನು ಗಮನಿಸಿ ಆಧುನಿಕ ಕಸಾಯಿಖಾನೆಯನ್ನು

ವ್ಯವಸ್ಥೆ ಮಾಡಲಾಗಿದೆ. ೨೦೦೦ ಇಸವಿಯ ಹೊತ್ತಿಗೆ ಬೇಡಿಕೆ ಹೆಚ್ಚಾಗಬಹುದು ಅಥವಾ ಕಡಿಮೆಯೂ ಆಗಬಹುದು, ಬೇಡಿಕೆಗನುಗುಣವಾಗಿ ಮಾಡಬೇಕು. ಈಗಿರುವ ಸಂಖ್ಯೆ ಕಡಿಮೆಯಾಗಬಹುದು, ಹೊಸ ಕಸಾಯಿಖಾನೆಯಲ್ಲಿ ಎಷ್ಟು ರಾಸುಗಳನ್ನು ಕೊಲ್ಲಬಹುದೆನ್ನುವ ವಿವರಗಳನ್ನು ಹೇಳಿದ್ದೇನೆ. ಈಗ ಮಾಂಸಹಾರಿಗಳಂ ಈ ದೇಶದಲ್ಲಿ ಇದ್ದಾರೆ. ಇದರಲ್ಲಿ ತತ್ವ ಏನೂ ಇಲ್ಲ ಗಾಂಧೀಜಿಯವರು ಏನೇನೂ ಹೇಳಿದ್ದಾರೆ, ಗಾಂಧೀಜಿಯವರು ಹೇಳಿರುವುದನ್ನು ಎಷ್ಟೆಷ್ಟು ಪರಿಪಾಲನೆ ಮಾಡುತ್ತಿದ್ದೇವೆ ಎಂದು ಎಲ್ಲರೂ ಮನದಟ್ಟು ಮಾಡಿಕೊಂಡರೆ ಬಹುಷಃ ಈ ನಾಡು ಉದ್ಧಾರವಾಗುತ್ತದೆ ಪ್ರತಿಯೊಂದಕ್ಕೂ ಗಾಂಧಿಯವರ ಉದಾಹರಣೆಯನ್ನು ಕೊಡುವುದು ಸರಿಯಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಮಂತ್ರಿಗಳು ಹೀಗೆ ಹೇಳಬಾರದು.

ಶ್ರೀ ಕೃಷ್ಣ.—ಈ ವಿಚಾರದಲ್ಲಿ ತತ್ವ ಏನೂ ಇಲ್ಲ, ಈಗಾಗಲೇ ಕಸಾಯಿಖಾನೆಗಳು ಇವೆ. ಆದರೆ ಈಗ ಶುಚಿಯನ್ನು ಕಾಪಾಡುವುದಕ್ಕೆ ಆಗುತ್ತಿಲ್ಲ. ಶುಚಿತ್ವವನ್ನು ಕಾಪಾಡುವುದಕ್ಕೋಸ್ಕರ ಆಧುನಿಕ ರೀತಿಯಲ್ಲಿ ಮಾಡಿದ್ದೇವೆ ಎಂದರೆ ಇದರಲ್ಲಿ ತತ್ವ ಏನು ಬಂತು?

ಶ್ರೀ ಪಟಮಕ್ಕಿ ರತ್ನಾಕರ್.—ದಯವಿಟ್ಟು ತಾವು ಶುಚಿ, ರುಚಿಯ ಪ್ರಶ್ನೆ ಮಾಡಬಾರದು.

ಅಧ್ಯಕ್ಷರು.—ಇದಕ್ಕೆ ಉತ್ತರ ಇಲ್ಲ, ತಾವು ಕುಳಿತುಕೊಳ್ಳಿ, ಹೇಳುತ್ತೇನೆ. ಒಟ್ಟಿನಲ್ಲಿ ಮಾತನಾಡುವುದು ನಿಮ್ಮ ಚಟ. ಈಗ ಕಾಲಾವಕಾಶ ಇಲ್ಲ. ಮೊನ್ನೆ ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರವನ್ನು ಹೇಳಿದ್ದಾರೆ. ನಿಜ ಹೇಳಬೇಕೆಂದರೆ, ಈ ಪ್ರಶ್ನೆಯನ್ನು ಇವತ್ತು ಇಟ್ಟುಕೊಳ್ಳಬಾರದಾಗಿತ್ತು.

ಶ್ರೀ ಪಟಮಕ್ಕಿ ರತ್ನಾಕರ್.—ಇದರಲ್ಲಿ ಬಹಳಷ್ಟು ಸಾಮಾಜಿಕ ವಿಷಯಗಳು ಕೂತ ಅಡಕವಾಗಿವೆ ಮಾನ್ಯ ಮಂತ್ರಿಗಳು ಪದೇಪದೇ ಶುಚಿ ಮತ್ತು ರುಚಿ ಎಂದು ಹೇಳುತ್ತಾರೆ. ಪ್ರಶ್ನೆ ಕೇಳುತ್ತಿರುವುದು ಅದರ ಬಗ್ಗೆ ಅಲ್ಲ. ಈ ಧರ್ಮ ನಿರಪೇಕ್ಷ ರಾಷ್ಟ್ರದಲ್ಲಿ ಇಂತಹ ಧರ್ಮ ಸೂಕ್ಷ್ಮ ವಿಚಾರಗಳನ್ನು ಸರ್ಕಾರ ಮತ್ತು ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ನೀವು ಹೇಗೆ ಇದನ್ನು ನಿಭಾಯಿಸಬೇಕು ಎಂದು ನಾವು ಪ್ರಶ್ನೆ ಕೇಳತಕ್ಕದ್ದು. ಅದು ಬಿಟ್ಟು ಗಾಂಧೀಜಿಯವರು ಏನೇನೋ ಹೇಳಿದ್ದಾರೆ. ಏನು ಮಾಡುವುದಕ್ಕೆ ಆಗುತ್ತದೆ ಎಂದು ಜವಾಬ್ದಾರಿ ಹೊತ್ತಿರತಕ್ಕಂಥ ಮಂತ್ರಿಗಳು ಹೇಳಿದರೆ ನಿಜಕೂ ಈ ಸದನಕ್ಕೆ ಅವಮಾನವಾಗುತ್ತದೆ.

ಅಧ್ಯಕ್ಷರು.—ನೀವು ಪ್ರಶ್ನೆ ಕೇಳುತ್ತೀರೋ, ಭಾಷಣ ಮಾಡುತ್ತೀರೋ ?

ಶ್ರೀ ಕೆ. ಹೆಚ್. ಪಾಟೀಲ್.—ಅವರು ಬೇಕಾದರೆ ನಮ್ಮದು ನಾನ್ ವೆಜಿಟೇರಿಯನ್ ಗವರ್ನಮೆಂಟ್ ಅಂತ ಹೇಳಲಿ

ಅಧ್ಯಕ್ಷರು.—ಗಾಂಧೀವಾದ ಬೇಡ. ಪ್ರಶ್ನೆ ಕೇಳಿ. ಎಲ್ಲರೂ ಕೂಡಿ ಗಾಂಧಿತತ್ವವನ್ನು ಕೊಲೆ ಮಾಡಿದ್ದಾರೆ.

ಶ್ರೀ ಪಟಮಕ್ಕಿ ರತ್ನಾಕರ್.—ನನ್ನ ಪ್ರಶ್ನೆ ಇಷ್ಟು. ಗೋಹತ್ಯಾ ಕಾಯಿದೆ ಜಾರಿಯಲ್ಲಿರತಕ್ಕಂಥ ಈ ಸಂದರ್ಭದಲ್ಲಿ ಸಾಮಾಜಿಕ ಸೂಕ್ಷ್ಮತೆಯನ್ನು ಮಾನ್ಯ ಮಂತ್ರಿಗಳು ಅರ್ಥಮಾಡಿಕೊಂಡು ಎಷ್ಟು ಚೆನ್ನಾಗಿ ನಿಭಾಯಿಸುತ್ತಾರೆ ಎನ್ನತಕ್ಕದ್ದು ವಿಚಾರ. ಅದಂ ಪದೇ ಪದೇ ರುಚಿಯಾಗಿ ಇಟ್ಟಿದ್ದೇವೆ, ಶುಚಿಯಾಗಿ ಇಟ್ಟಿದ್ದೇವೆ ಎಂದು ಹೇಳುತ್ತಾರೆ.

ಅಧ್ಯಕ್ಷರು.—ನೀವು ನೇರವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಪಟಮಕ್ಕಿ ರತ್ನಾಕರ್.—ಈ ಪ್ರಶ್ನೆಯಲ್ಲಿ ಕೆಲವು ಸಾಮಾಜಿಕ ಸೂಕ್ಷ್ಮತೆಗಳು, ಧರ್ಮ ಸೂಕ್ಷ್ಮತೆಗಳೂ ಇರುವುದರಿಂದ ಈ ವಿಚಾರವನ್ನು ತಾವು ಅಷ್ಟು ಲಘುವಾಗಿ ಪರಿಗಣಿಸಬಾರದು. ಇಂತಹ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಇದಕ್ಕೆ ಏನು ಪರಿಹಾರ ರೂಪದಲ್ಲಿ ಮಾಡಬೇಕು ಎಂದು ತಾವು ಹೇಳಬೇಕು.

ಶ್ರೀ ಕೃಷ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಧರ್ಮದ ಬಗ್ಗೆ ಹೇಳಿದ್ದಾರೆ. ಧರ್ಮಾದ ವಿಚಾರ ಏನೂ ಕಸಾಯಿಖಾನೆಯಲ್ಲಿ ಅಡಕವಾಗಿಲ್ಲವೆಂದು ನನ್ನ ಭಾವನೆ. ಈಗ ಅನೇಕ ಸಂಘಸಂಸ್ಥೆಗಳು ಮಠಾಧಿಪತಿಗಳು ಇದರ ವಿರುದ್ಧವಾಗಿ ಪ್ರತಿಭಟನೆ ಮಾಡಿದ್ದಾರೆ. ಸರ್ಕಾರಕ್ಕೆ ತೆರೆದ ಮನಸ್ಸು ಇದೆ.

ಈ ವಿಚಾರದಲ್ಲಿ ಅವರ ಜೊತೆಗೆ ಕೂಳಿತುಕೊಂಡು ಮಾತನಾಡಲಿಕ್ಕೆ ಸರ್ಕಾರ ಸಿದ್ಧವಿದೆ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಅಂತರ ರಾಜ್ಯ ಬಸ್ಸುಗಳ ಕುರಿತಂ

೨೯೫೪. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಲ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೬-೬೭, ೧೯೬೭-೬೮ ಮತ್ತು ೧೯೬೮-೬೯ರಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತಮಿಳು ನಾಡು, ಕೇರಳ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳ ನಡುವೆ ಓಡಿಸಲಾದ ಬಸ್‌ಗಳ ಸಂಖ್ಯೆ?

ಆ) ಯಾವ ಒಪ್ಪಂದ ಮಂತ್ತು ಷರತ್ತುಗಳ ಮೇಲೆ ಈ ವಾಹನಗಳಂ ಓಡಾಡುತ್ತಿದ್ದವು?

ಇ) ಈ ಒಪ್ಪಂದ ಮತ್ತು ಷರತ್ತುಗಳು ಸರ್ಕಾರಕ್ಕೆ ಅಹಿತಕರವಾಗಿದೆ ಎಂಬುದು ನಿಜವೇ?

ಈ) ಹಾಗಿದ್ದಲ್ಲಿ, ಇದನ್ನು ಸಮುದೂಗಿಸಲು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಇತರ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯದ ವಾಹನಗಳಂ

	ಆಂಧ್ರಪ್ರದೇಶ್	ತಮಿಳುನಾಡು	ಕೇರಳ	ಮಹಾರಾಷ್ಟ್ರ	ಗೋವಾ
೧೯೬೬-೬೭	೫೫೭	೧೬೫	೭೫	೩೪೦+೧	೨೧
೧೯೬೭-೬೮	೫೬೭	೧೬೫	೭೫	೩೪೩+೧	೭೦
೧೯೬೮-೬೯	೫೮೨	೧೬೫	೭೫	೩೪೩+೧	೨೪

ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕೇರಳ ಮಂತ್ತು ಗೋವಾ ರಾಜ್ಯಗಳ ವಾಹನಗಳು ಕರ್ನಾಟಕದಲ್ಲಿ

	ಆಂಧ್ರಪ್ರದೇಶ್	ತಮಿಳುನಾಡು	ಕೇರಳ	ಮಹಾರಾಷ್ಟ್ರ	ಗೋವಾ
೧೯೬೬-೬೭	೩೧೫	೧೯೮	೨೨	ಸಿಂಗಲ್ ಪಾಯಿಂಟ್	೪೪
೧೯೬೭-೬೮	೩೩೫	೧೯೮	೨೨	ತೆರಿಗೆ ಆಧಾರದ	೪೪
೧೯೬೮-೬೯	೩೪೧	೧೯೮	೨೨	ಮೇರೆಗೆ ಮೇಲು ಸಹಿ ಪಡೆಯಲು ಅವಕಾಶವಿರುವುದಿಲ್ಲ	೫೦

ಆ) ವಾಹನಗಳು ಅಂತರರಾಜ್ಯ ನಿಯಮ ಮತ್ತು ಪರಸ್ಪರ ಒಪ್ಪಂದದ ಮೇಲೆ ಸಿಂಗಲ್ ಪಾಯಿಂಟ್ ತೆರಿಗೆಯಲ್ಲಿ (ಪಕ್ಕ) ನಿರಂತರ ಪರವಾನಿಗೆ ಹೊಂದಿ ಒಪ್ಪಂದದ ಪ್ರಕಾರ ಮಾರ್ಗಗಳಲ್ಲಿ ಮಂತ್ತು ಒಪ್ಪಂದಕ್ಕೆ ಹೊರತಾದ ವಾಹನಗಳು ಡಬ್ಬಲ್ ಪಾಯಿಂಟ್ ತೆರಿಗೆಯಲ್ಲಿ ತಾತ್ಕಾಲಿಕ ಪರವಾನಿಗೆಯಲ್ಲಿ ಓಡುತ್ತವೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾನು ಇಂಟರ್ ಸ್ಟೇಟ್ ಬಸ್ಸುಗಳ ಬಗ್ಗೆ ಕೇಳಿದ್ದೇನೆ. ಮಾನ್ಯ ಸಚಿವರು ಬಸ್ ಪ್ಯಾರಿಟಿ ಮೈಂಟೆನ್ ಮಾಡಿದ್ದಾರೆಯೇ, ಇಲ್ಲದೇ ಹೋದರೆ ಕಿಲೋಮೀಟರ್ ಪ್ಯಾರಿಟಿ ಮೈಂಟೆನ್ ಮಾಡಿದ್ದಾರೆಯೇ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ನಾನು ''ಈ ಒಪ್ಪಂದ ಮತ್ತು ಷರತ್ತುಗಳು ಸರ್ಕಾರಕ್ಕೆ ಅಹಿತಕರವಾಗಿರುವುದು ನಿಜವೇ'' ಎಂದು ಕೇಳಿದ್ದೇನೆ, ಅದಕ್ಕೆ ಅವರು ''ಇಲ್ಲ'' ಎಂದು ಹೇಳಿದ್ದಾರೆ ಇದು ಅಹಿತಕರವಾಗಿದೆ, ನಮ್ಮ ಸರ್ಕಾರಕ್ಕೆ ೩ ಕೋಟಿ ರೂಪಾಯಿಗಳ ಟ್ಯಾಕ್ಸ್ ಕೂಡ ಅನ್ಯಾಯವಾಗುತ್ತಿದೆ. ಇನ್ನೊಂದು ಇವರು ಬಸ್ ಪ್ಯಾರಿಟಿ ಏಕೆ ಇನ್‌ಸಿಸ್ಟ್ ಮಾಡುತ್ತಾ ಇಲ್ಲ. ನಾವು ಇನ್ನೂರು ಮೈಲಿ ಕೊಟ್ಟರೆ,